ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (106)151
ಸದಸ್ಯರ ಹೆಸರು : ಶ್ರೀ ಶ್ರೀಕಾಂತ್ ಕುಲಕರ್ಣಿ.
ಉತ್ತರಿಸುವ ಸಚಿವರು : (ಶ್ರೀ ಬಸವರಾಜ್ ಬೊಮ್ಮಾಯಿ)
ಜಲ ಸಂಪನ್ಮೂಲ ಸಚಿವರು

ಅ) ಜಮಖಂಡಿ ತಾಲ್ಲೂಕಿನ ಹಿರೇಪಡಸಲಗಿ ಹಾಗೂ ನಾಗನೂರು ಹಾಗೂ ಬೀಳಗಿ ತಾಲೂಕಿನ ಕುಂದರಗಿ, ಗಿರಿಸಾಗರ ಹಾಗೂ ಬಾವಲತ್ತಿ ಗ್ರಾಮಗಳು ಕೃಷ್ಣಾ ಹಾಗೂ ಘಟಪ್ರಭಾ ನದಿಯ ನೀರಿನಿಂದ ಸುತ್ತುವರಿಯಲ್ಪಟ್ಟು, ಜನರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಬಂದಿದೆ.

ಆ) ಹಾಗಿದ್ದಲ್ಲಿ, ಸಾರ್ವಜನಿಕರ ಪುನರ್ ವಸತಿಯ ಬಗ್ಗೆ ಸರ್ಕಾರ ಕೈಗೊಂಡ ಯೋಜನೆಗಳೇನು;

ಆಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿ ಆರ್.ಎಲ್. 521.00 ಮೀ.ವರೆಗಿನ ಜಮೀನು ಮತ್ತು ಕಟ್ಟಡಗಳನ್ನು ಸ್ವಾಧೀನಪಡಿಸಿಕೊಳ್ಳಲಾಗಿರುತ್ತದೆ. ಸದರಿ ಜಮಖಂಡಿ ತಾಲೂಕಿನ ಹಿರೇಪಡಸಲಗಿ ಮತ್ತು ನಾಗನೂರ ಹಾಗೂ ಬೀಳಗಿ ತಾಲೂಕಿನ ಕುಂದರಗಿ, ಗಿರಿಸಾಗರ ಮತ್ತು ಬಾವಲತ್ತಿ ಗ್ರಾಮಗಳು ಎಫ್.ಆರ್.ಎಲ್. 523 ರಡಿಯಲ್ಲಿ ಬರುತ್ತಿರುವುದರಿಂದ ಪುನರ್ ವಸತಿ ಕಲ್ಪಸುವ ಪ್ರಸ್ತಾವನೆ ಇರುವುದಿಲ್ಲ.

ಇ) ಈ ಗ್ರಾಮಗಳ ಕಟ್ಟಡಗಳ ಪರಿಹಾರ ಧನವನ್ನು ಸರ್ಕಾರವು ಸಾರ್ವಜನಿಕರಿಗೆ ತಲುಪಿಸುವುದಕ್ಕೆ ಸಮಯವನ್ನೇನಾದರೂ ನಿಗಧಿಪಡಿಸಿಕೊಂಡಿವೆಯೆ?

ಉದ್ಭವಿಸುವುದಿಲ್ಲ.

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (263)152
2. ಸದಸ್ಯರ ಹೆಸರು : ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬರಾವ್
3. ಉತ್ತರಿಸುವ ಸಚಿವರು : (ಶ್ರೀ ಬಸವರಾಜ್ ಬೊಮ್ಮಾಯಿ) ಜಲಸಂಪನ್ಮೂಲ ಸಚಿವರು

ಅ) ಅಥಣಿ ತಾಲೂಕಿನ ಹಲ್ಯಾಳ ಹತ್ತಿರ ಕೃಷ್ಣಾ ನದಿಯಿಂದ ಮಾಡಲಾಗುತ್ತಿರುವ ಏತ ನೀರಾವರಿ ಯೋಜನೆಯಿಂದ ಜಮಖಂಡಿ ತಾಲೂಕಿನ ಸಾವಳಗಿ ಭಾಗದ ಬರಗಾಲ ಪೀಡಿತ ಜಮೀನುಗಳಿಗೆ ನೀರಾವರಿ ಸೌಲಭ್ಯ ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಹಿಪ್ಪರಗಿ ನೀರಾವರಿ ಯೋಜನೆಯಡಿ, ಸಾವಳಗಿ ಭಾಗದ ಬರಗಾಲ ಪೀಡಿತ ಪ್ರದೇಶದ 9045 ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲು, "ಸಾವಳಗಿ–ತುಂಗಳ ಏತ ನೀರಾವರಿ ಯೋಜನೆ"ಯನ್ನು ಹಲ್ಯಾಳ ಏತ ನೀರಾವರಿ ಯೋಜನೆಯ ಮೂರ್ಖ ಕಾಲುವೆಯ ಕಿ.ಮಿ.39.98ರಲ್ಲಿ ಕೈಗೆತ್ತಿಕೊಳ್ಳಲಾಗಿದೆ.

ಆ) ಆಲಮಟ್ಟಿ ಜಲಾಶಯದಿಂದ ಸಂಗ್ರಹಿತ ಹಿನ್ನೀರಿನಲ್ಲಿ 1.4 ಟಿ.ಎಂ.ಸಿ. ನೀರನ್ನು ಸಾವಳಗಿ ಭಾಗದ ಜಮೀನುಗಳಿಗೆ ನೀರಾವರಿಗಾಗಿ ಬಳಸಲು ಮೀಸಲಿಟ್ಟಿರುವುದು ನಿಜವೇ? ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಹಿಪ್ಪರಗಿ ನೀರಾವರಿ ಯೋಜನೆಗೆ ಹಂಚಿಕೆ ಮಾಡಲಾಗಿರುವ 12.10 ಟಿಎಂಸಿ ನೀರಿನ ಪ್ರಮಾಣದಲ್ಲಿ, "ಸಾವಳಗಿ–ತುಂಗಗಳ ಏತ ನೀರಾವರಿ ಯೋಜನೆ"ಗಾಗಿ 1.28 ಟಿಎಂಸಿ ನಿಗದಿಪಡಿಸಿಕೊಳ್ಳಲಾಗಿದೆ. ಆಲಮಟ್ಟಿ ಜಲಾಶಯದ ಹಿನ್ನೀರಿನಿಂದ ಸಾವಳಗಿ ಭಾಗದ ಜಮೀನುಗಳ ನೀರಾವರಿಗಾಗಿ ಯಾವುದೇ ನೀರನ್ನು ಮೀಸಲಿಟ್ಟಿರುವುದಿಲ್ಲ.

ಇ) ಜಮಖಂಡಿ ತಾಲೂಕಿನ ತುಬಚಿ ಹತ್ತಿರ ಕೃಷ್ಣಾ ನದಿಯ ನೀರನ್ನು ಎತ್ತಿ ಸಾವಳಗಿಯ ಜಾಕ್‌ವೆಲ್‌ವರೆಗೆ ನೀರನ್ನು ಪೂರೈಸುವ ಯೋಜನೆಯು ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಹಿಪ್ಪರಗಿ ಯೋಜನೆಯಡಿಯಲ್ಲ, ಈಗಾಗಲೇ "ಸಾವಳಗಿ–ತುಂಗಳ ಏತ ನೀರಾವರಿ ಯೋಜನೆ'ಯನ್ನು ಕೈಗೆತ್ತಿಕೊಂಡಿರುವುದರ ಮೇರೆಗೆ ತುಬಚಿ ಹತ್ತಿರ ಕೃಷ್ಣಾ ನದಿಯಿಂದ ನೀರು ಎತ್ತಿ ಸಾವಳಗಿ ಜಾಕ್‌ವೆಲ್‌ಗೆ ಪೂರೈಸುವ ಯೋಜನೆಯ ಪ್ರಸ್ತಾವನೆ ಇರುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (258)153

ಸದಸ್ಯರ ಹೆಸರು : ಶ್ರೀ ಲಾಲಾಜಿ ಆರ್.ಮೆಂಡನ್ (ಕಾಪು)

ಉತ್ತರಿಸಬೇಕಾದ ಸಚಿವರು : (ಶ್ರೀ ಗೂಳಿ ಹಟ್ಟಿ ಡಿ.ಶೇಖರ್) ಜವಳಿ, ಯುವಜನಸೇವಾ ಮತ್ತು ಕ್ರೀಡಾ ಸಚಿವರು

ಅ) ಗ್ರಾಮೀಣ ಪ್ರದೇಶದ ಕ್ರೀಡಾಪ್ರತಿಭೆಗೆ ಹಾಗೂ ವಿದ್ಯಾವಂತ ಅಂಗವಿಕಲರಿಗೆ ಸರ್ಕಾರ ಉದ್ಯೋಗದಲ್ಲಿ ಹಾಗೂ ಖಾಸಗಿ ವಲಯದಲ್ಲಿ ಶೇಕಡಾ 5/– ಅನುಪಾತದಲ್ಲಿ ಅವಕಾಶ ಕಲ್ಪಿಸುವ ಪ್ರಸ್ತಾವ ಸರ್ಕಾರದ ಮುಂದಿದೆಯೇ;